# ಜಿದಾನೆಯ ರಾಜೀನಾಮೆ

**2018**ರ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ ಆರಂಭವಾಗಿರುವ ಈ ಹೊತ್ತಿನಲ್ಲಿ ವಿವಾದಾಸ್ಪದ ಸುದ್ದಿಗಳಿಗೆ ಕೊರತೆಯಿಲ್ಲ. ಕಳೆದ ವಾರ ಹೀಗೆ ಸುದ್ದಿ ಮಾಡಿದಾತ ವಿಶ್ವವಿಖ್ಯಾತ ವೃತ್ತಿಪರ ಫುಟ್‌ಬಾಲ್ ಕೋಚ್ ಜಿನೆದಿನ್ ಜಿದಾನೆ. ಈತನ ಹೆಸರನ್ನು ಜೈನುದ್ದೀನ್ ಜಿದೆನ್ ಎನ್ನುವವರೂ ಇದ್ದಾರೆ. ಆದರೆ ಏಕೋ ಈ ಜಿದಾನೆ ಎನ್ನುವ ಶಬ್ದವೇ ಹೆಚ್ಚು ಇಷ್ಟವಾಗುತ್ತಿದೆ. ಏಕೆಂದರೆ ಆ ಶಬ್ದದಲ್ಲೇ 'ಆನೆ' ಇದೆಯಲ್ಲ! ಜಿದಾನೆ ಅಂತರರಾಷ್ಟ್ರೀಯ ಫುಟ್‌ಬಾಲ್ ಆಡುತ್ತಿದ್ದ ಕಾಲದಲ್ಲಿ ಆನೆಯಂತೆಯೇ ಇದ್ದ; ಅದೂ ಮದ್ದಾನೆ! ಕಾಲಿಗೆ ಚೆಂಡು ಸಿಕ್ಕಿದರೆ ಸಾಕು, ಅದನ್ನು ಕಾಲಲ್ಲೇ ತಿರುತಿರುಗಿಸಿ, ಎದುರಾಳಿಗಳನ್ನು ವಂಚಿಸಿ, ದೇಹವನ್ನೇ ಮಂತ್ರದಂಡದಂತೆ ಬಳಸಿ ಮುನ್ನುಗ್ಗುತ್ತಿದ್ದ ಜಿದಾನೆಯ ಆಟಕ್ಕೆ ಬೇರೆ ಹೋಲಿಕೆ ಇಲ್ಲ. ಈ ಆಕ್ರಮಣಕಾರಿ ಮಿಡ್‌ಫೀಲ್ಡರ್, ಚೆಂಡಿನ ನಿಯಂತ್ರಣ ಸಾಧಿಸುವಲ್ಲಿ ಮತ್ತು ತಂತ್ರಗಾರಿಕೆಯಲ್ಲಿ ಸಾಧಿಸಿದ ನೈಪುಣ್ಯ ಈತನಿಗೆ ಫುಟ್‌ಬಾಲ್ ಜಗತ್ತಿನ 'ಸಾರ್ವಕಾಲಿಕ ಶ್ರೇಷ್ಠ ಆಟಗಾರರಲ್ಲಿ ಒಬ್ಬ' ಎನ್ನುವ ಖ್ಯಾತಿ ತಂದುಕೊಟ್ಟಿದೆ.

108 ಬಾರಿ ಫ್ರಾನ್ಸ್ ತಂಡದ ಕ್ಯಾಪ್ಟನ್ ಆಗಿ ಆಡಿದಾತ ಜಿದಾನೆ. 1998, 2000 ಮತ್ತು 2003ರಲ್ಲಿ 'ಫಿಫಾ ವಿಶ್ವ ವರ್ಷದ ಆಟಗಾರ' ಪ್ರಶಸ್ತಿ ಗೆದ್ದವನೀತ. 1998ರಲ್ಲಿ ಫ್ರಾನ್ಸ್ ವಿಶ್ವಕಪ್ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದ. 2006ರಲ್ಲಿ ಈತನ ಫ್ರಾನ್ಸ್ ತಂಡ ವಿಶ್ವಕಪ್ ಫೈನಲ್‌ವರೆಗೆ ಏರಿತ್ತು. 2000ದಲ್ಲಿ ಈತನಿದ್ದ ಫ್ರಾನ್ಸ್, ಯೂರೋಪಿಯನ್ ಚಾಂಪಿಯನ್ ಆಯಿತು.

ಇದೆಲ್ಲ ಹಳೆಯ ಕಥೆ. ಸದ್ಯಕ್ಕೆ ಈತ ಸುದ್ದಿಯಲ್ಲಿರುವುದು ವಿಶ್ವಖ್ಯಾತಿಯ ಫುಟ್‌ಬಾಲ್ ಕ್ಲಬ್ ಸ್ಪೇನ್‌ನ ರಿಯಲ್ ಮ್ಯಾಡ್ರಿಡ್‌ನ ಕೋಚ್ ಹುದ್ದೆಗೆ ರಾಜೀನಾಮೆ ನೀಡಿದ್ದರಿಂದ. 2016ರಲ್ಲಿ ಈತ ರಿಯಲ್ ಮ್ಯಾಡ್ರಿಡ್ ಕ್ಲಬ್‌ಗೆ ಕೋಚ್ ಆದ. ಈತನ ಕೋಚ್ ಅವಧಿಯಲ್ಲಿ ರಿಯಲ್ ಮ್ಯಾಡ್ರಿಡ್ ಮೂರು ಸಲ ಯೂರೋಪಿಯನ್ ಚಾಂಪಿಯನ್‌ಷಿಪ್ ಗೆದ್ದು ದಾಖಲೆ ನಿರ್ಮಿಸಿತು. ಲಾ ಲಿಗಾ ಟೈಟಲ್ ಮತ್ತು ಸೂಪರ್‌ಕೊಪಾ ಕಪ್ ಗೆದ್ದುಕೊಂಡಿತು. ಫಿಫಾ ಕ್ಲಬ್ ವಿಶ್ವಕಪ್ ಪ್ರಶಸ್ತಿಯನ್ನೂ ಎರಡು ಸಲ ಬಾಚಿಕೊಂಡಿತು. ಮೂರು ಸಲ ತಂಡವೊಂದಕ್ಕೆ ಯೂರೋಪಿಯನ್ ಲೀಗ್ ಪ್ರಶಸ್ತಿ ಗೆಲ್ಲಿಸಿಕೊಟ್ಟ ಏಕೈಕ ಕೋಚ್ ಈತ. ಹಾಗೆಂದೇ 2017ರ 'ಬೆಸ್ಟ್ ಫಿಫಾ ಮೆನ್ಸ್ ಕೋಚ್' ಪ್ರಶಸ್ತಿ ಈತನ ಮುಡಿಗೇರಿತು.

ಇಷ್ಟೆಲ್ಲ ದಾಖಲೆಗಳಿದ್ದೂ ಎರಡು ವಾರಗಳ ಹಿಂದೆ ಈತ ತಂಡದ ಕೋಚ್ ಹುದ್ದೆಯಿಂದ ಹಠಾತ್ತಾಗಿ ಹೊರಬಿದ್ದ. ತಂಡದ ಅಧ್ಯಕ್ಷ ಫ್ಲೊರೆಂಟಿನೊ ಪೆರೆಜ್ ಜತೆಗಿನ ಭಿನ್ನಾಭಿಪ್ರಾಯವೇ ರಾಜೀನಾಮೆಗೆ ಕಾರಣವಂತೆ.

ಲಕ್ಷಾಂತರ ಪ್ರೇಕ್ಷಕರು ಮೈದಾನದಲ್ಲಿ ಹುಚ್ಚೆದ್ದು ಕುಣಿಯುವಂತೆ ಮಾಡುವ ಸೂಪರ್‌ಸ್ಟಾರ್‌ಗಳು ರಿಯಲ್ ಮ್ಯಾಡ್ರಿಡ್ ತಂಡದಲ್ಲಿದ್ದಾರೆ. ಮುಸುಕಿನ ಗುದ್ದಾಟ ಸಹಜವೇ. ಈ ಅತಿರಥರನ್ನೆಲ್ಲ ಕ್ಲಬ್‌ನಲ್ಲಿ ಉಳಿಸಿಕೊಂಡು, ಪ್ರತಿಯೊಂದು ಪಂದ್ಯಕ್ಕೂ ಸಮತೋಲನ ಕಾಯ್ದುಕೊಳ್ಳುವುದು ಕೋಚ್‌ಗೆ ಬಲುಕಷ್ಟದ ಕೆಲಸ. ಎದುರಾಳಿ ತಂಡದ ಬಲಕ್ಕೆ ತಕ್ಕಂತೆ ಯಾರನ್ನು ರಿಸರ್ವ್ ಮಾಡಬೇಕು, ಯಾವ ಜೋಡಿಯನ್ನು ಮೈದಾನಕ್ಕೆ ಇಳಿಸಬೇಕು.. ಎನ್ನುವುದನ್ನೆಲ್ಲ ಕೋಚ್ ಚಾಕಚಕ್ಯತೆಯಿಂದ ನಿರ್ವಹಿಸಬೇಕು. ಇತ್ತೀಚೆಗೆ ಮಹತ್ವದ ಪಂದ್ಯವೊಂದಕ್ಕೆ ಸ್ಟಾರ್ ಆಟಗಾರ ಗಾರೆಕ್ ಬೇಲ್‌ನನ್ನು ಸಬ್‌ಸ್ಟಿಟ್ಯೂಟ್ ಮಾಡಿ ಕುಳ್ಳಿರಿಸಿದ ಜಿದಾನೆ. ಆತ ಬಹಿರಂಗವಾಗಿ ಪ್ರತಿಭಟಿಸಿದ. ಅದರ ಬೆನ್ನಲ್ಲೇ ಸೂಪರ್‌ಸ್ಟಾರ್ ಕ್ರಿಶ್ಚಿಯಾನೊ ರೊನಾಲ್ಡೊ ತಂಡ ಬಿಡುವುದಾಗಿ ಬೆದರಿಕೆ ಒಡ್ಡಿದ. ಆದರೆ ಜಿದಾನೆ ಇಂತಹ ತಂತ್ರಗಳಿಗೆಲ್ಲ ಬಗ್ಗಲಿಲ್ಲ. ಕ್ಲಬ್ ಅಧ್ಯಕ್ಷರ ಜತೆಗೆ ಭಿನ್ನಮತಕ್ಕೆ ಇದೇ ಮೂಲ ಕಾರಣವಂತೆ.

ಈಗ ಫುಟ್‌ಬಾಲ್ ಲೋಕದ ಮುಂದೆ ಎರಡು 'ಮಿಲಿಯನ್ ಡಾಲರ್ ಪ್ರಶ್ನೆ'ಗಳಿವೆ. ಮೊದಲನೆಯದ್ದು, ಕೋಚ್ ಜಿದಾನೆಯ ಮುಂದಿನ ಪಯಣ ಎಲ್ಲಿಗೆ.. ಎನ್ನುವುದು. ಎರಡನೆಯದ್ದು, ಜಿದಾನೆಯ ಸ್ಥಾನವನ್ನು ತುಂಬುವ ಸಮರ್ಥರು ಯಾರು... ಎನ್ನುವುದು.

ಕೋಚ್ ಆಗಿ ಜಿದಾನೆಯನ್ನು ತೆರೆದ ತೋಳುಗಳಲ್ಲಿ ಸ್ವಾಗತಿಸುವ ಕ್ಲಬ್‌ಗಳಿಗೇನೂ ಕೊರತೆಯಿಲ್ಲ. ಆದರೆ ಸದ್ಯಕ್ಕೆ ಸ್ವಲ್ಪ ಸಮಯ ವಿಶ್ರಾಂತಿ ಪಡೆಯಲು ಜಿದಾನೆ ನಿರ್ಧರಿಸಿದ್ದಾನೆ. ಇಂಗ್ಲೆಂಡಿನ ಪ್ರತಿಷ್ಠಿತ ಚೆಲ್ಸೀ ಕ್ಲಬ್ ಈ ನಿಟ್ಟಿನಲ್ಲಿ ಆಸಕ್ತಿ ಹೊಂದಿದ್ದರೂ, ಜಿದಾನೆಗೆ ಇಂಗ್ಲಿಷ್ ಬರುವುದಿಲ್ಲವಾದ್ದರಿಂದ ಆ ಸಾಧ್ಯತೆ ದೂರವೇ.

ಜಿದಾನೆಯ ನಿಕಟವರ್ತಿಗಳ ಪ್ರಕಾರ, ಫ್ರಾನ್ಸ್ ರಾಷ್ಟ್ರೀಯ ತಂಡದ ಕೋಚ್ ಹುದ್ದೆಯ ಮೇಲೆ ಆತನ ಕಣ್ಣಿದೆ. ಈಗ ರಷ್ಯಾದಲ್ಲಿ ಆರಂಭಗೊಂಡಿರುವ ಫಿಫಾ ವಿಶ್ವಕಪ್‌ನಲ್ಲಿ ಫ್ರಾನ್ಸ್ ಫೈನಲ್‌ವರೆಗೆ ಏರಲಿಲ್ಲ ಎಂದಾದಲ್ಲಿ ಈಗಿನ ಕೋಚ್ ಡಿಡಿರ್ ಡೆಸ್‌ಚಾಂಪ್ಸ್ ತಲೆದಂಡ ಖಂಡಿತ. ಈ ಹಂತದಲ್ಲಿ ಜಿದಾನೆ, ಫ್ರಾನ್ಸ್ ತಂಡದ ಕೋಚ್/ ಮ್ಯಾನೇಜರ್ ಆಗಬಹುದು. ಹಾಗಾದಲ್ಲಿ, ಜಿದಾನೆ ಮಾರ್ಗದರ್ಶನದಲ್ಲಿ ಫ್ರಾನ್ಸ್ ಮುಂದಿನ ವಿಶ್ವಕಪ್ ಗೆದ್ದರೆ, ಆಟಗಾರ ಮತ್ತು ಕೋಚ್ ಆಗಿ ವಿಶ್ವಕಪ್ ಫುಟ್‌ಬಾಲ್ ಗೆದ್ದ ಜಗತ್ತಿನ ಏಕೈಕ ವ್ಯಕ್ತಿ ಎಂಬ ಕೀರ್ತಿಯೂ ಜಿದಾನೆಗೆ ದಕ್ಕಬಹುದು!

ಜಿದಾನೆ ರಾಜೀನಾಮೆಯಿಂದ ರಿಯಲ್ ಮ್ಯಾಡ್ರಿಡ್‌ನಲ್ಲಿ ಕೋಲಾಹಲ ಉಂಟಾಗಿದೆ. ಕಳೆದ 15 ವರ್ಷಗಳಲ್ಲಿ 13 ಕೋಚ್‌ಗಳು ಈ ತಂಡಕ್ಕೆ ಬಂದು ಹೋಗಿದ್ದಾರೆ. ಜಿದಾನೆಯ ಎರಡೂವರೆ ವರ್ಷಗಳ ಅವಧಿಯೇ ದೀರ್ಘವಾದದ್ದು. ಯಾರೇ ಹೊಸ ಕೋಚ್ ಬಂದರೂ ತಕ್ಷಣಕ್ಕೆ ಬೇಲ್ ಮತ್ತು ರೊನಾಲ್ಡೊ ಸವಾಲುಗಳಿಗೆ ಉತ್ತರ ಹುಡುಕಬೇಕು. ಈ ಮಧ್ಯೆ ಪಿಎಸ್‌ಜಿ ತಂಡದಿಂದ ಬ್ರೆಜಿಲ್‌ನ ಸ್ಟಾರ್ ನೈಮರ್, ರಿಯಲ್ ಮ್ಯಾಡ್ರಿಡ್ ಸೇರುವ ಸುದ್ದಿಗಳಿವೆ. ತಂಡದಲ್ಲಿರುವ ಮಾರ್ಸೆಲೊ, ಲುಕಾ, ಕರೀಂ ಬೆಂಜೆಮಾ 30ರ ಹರೆಯ ದಾಟಿದ್ದು ಅವರನ್ನೂ ಬದಲಿಸುವ ಸಂದರ್ಭ ಇದ್ದಂತಿದೆ. ಈ ಎಲ್ಲ ತಲೆನೋವುಗಳ ಹಿನ್ನೆಲೆಯಲ್ಲಿ ಜಿದಾನೆ ತಂಡಕ್ಕೆ ಬೈ ಎಂದದ್ದು ಸರಿಯಾದ ನಿರ್ಧಾರವೇ ಎನ್ನಬಹುದು. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65